ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಆಥಣಿ ಮತ್ತು ಕಾಗವಾಡ ಕ್ಷೇತ್ರಗಳಲ್ಲಿ ಲೋಕೋಪಯೋಗಿ ಇಲಾಖೆಯ ಪಶದಲ್ಲಿರುವ ರಸ್ತೆಗಳ ಒಟ್ಟು ಉದ್ದ ಈ ಕೆಳಕಂಡಂತಿದೆ.—

ರಸ್ತೆಯ ವರ್ಗ	ಕಾಗವಾಡ ಕ್ಷೇತ್ರ	ಆಥಣಿ ಕ್ಷೇತ್ರ
	ಉದ್ದ ಕಿ.ಮೀ.	ಉದ್ದ ಕಿ.ಮೀ.
ರಾಜ್ಯ ಹೆದ್ದಾರಿ	೪೪.೨೦	೪೫.೦೦
ಜಿಲ್ಲಾ ಮುಖ್ಯ ರಸ್ತೆ	೨೬.೮೦	೩೪.೬೦
ಜಿಲ್ಲಾ ಇತರೇ ರಸ್ತೆ	೩೯.೧೦	೧೪೨.೫೦
ಗ್ರಾಮಾಂತರ ರಸ್ತೆ	೧೦೭.೫೭	೧೨೫.೪೦
ರಸ್ತೆಗಳ ಒಟ್ಟು ಉದ್ದ	೨೧೭.೬೭	೩೪೭.೫೦

ಆ) ಈ ಪೈಕಿ ಆಥಣಿ ಮತ್ತು ಕಾಗವಾಡ ಕ್ಷೇತ್ರಗಳಲ್ಲಿ ಡಾಂಬರ್ ಹಾಕಿರುವ ರಸ್ತೆಗಳ ಉದ್ದದ ವಿವರಗಳು ಈ ಕೆಳಕಂಡಂತಿದೆ. –

ರಸ್ತೆಯ ವರ್ಗ	ಕಾಗವಾಡ ಕ್ಷೇತ್ರ	ಆಥಣಿ ಕ್ಷೇತ್ರ
	ಉದ್ದ ಕಿ.ಮೀ.	ಉದ್ದ ಕಿ.ಮೀ.
ರಾಜ್ಯ ಹೆದ್ದಾರಿ	೪೪.೨೦	೪೫.೦೦
ಜಿಲ್ಲಾ ಮುಖ್ಯ ರಸ್ತೆ	೨೩.೧೦	೨೫.೦೦
ಜಿಲ್ಲಾ ಇತರೇ ರಸ್ತೆ	೮.೪೦	೨೦.೦೦
ಗ್ರಾಮಾಂತರ ರಸ್ತೆ	೨೮.೯೦	೧.೦೦
ರಸ್ತೆಗಳ ಒಟ್ಟು ಉದ್ದ	೧೦೪.೬೦	೯೧.೦೦

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ನಾನು ಕೇಳುತ್ತಿರುವುದು ಇಷ್ಟೆ. ಆಥಣಿ ಊರಿನೊಳಗೆ ಮುನ್ಸಿಪಲ್ ಪ್ರದೇಶದಲ್ಲಿಯೂ ಯಾವ ರಸ್ತೆಯಲ್ಲಿಯೂ ಡಾಂಬರ್ ಇಲ್ಲ. ಟೌನ್‌ನಲ್ಲಾದರೂ ಡಾಂಬರ್ ರಸ್ತೆಗಳನ್ನು ಮಾಡಿಸದಿದ್ದರೆ ತುಂಬಾ ಕಷ್ಟ ಆಗುತ್ತದೆ. ಅಲ್ಲಿ ಒಂದು ಪೆಹಿಕಲ್ ಕೂಡಾ ಸುಗುಮವಾಗಿ ಹೋಗುವುದಕ್ಕೆ ಆಗುವುದಿಲ್ಲ. ದಯಮಾಡಿ ಆ ರಸ್ತೆಗಳನ್ನು ಡಾಂಬರ್ ರಸ್ತೆಗಳನ್ನಾಗಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅದು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟದ್ದಾದರೆ ಟೌನ್ ಲಿಮಿಟ್‌ನಲ್ಲಾದರೂ, ಏನು ಹಣದ ಅಡಚಣೆ ಇದ್ದರೂ ಕೂಡಾ ಮಾಡಿಸಿಕೊಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತರ್ಜಾತಿ ವಿವಾಹಕ್ಕೆ ಧನ ಸಹಾಯ ಮಂಜೂರಾತಿ ಬಗ್ಗೆ.

೭೭೩. ಶ್ರೀ ಕೆ. ಕುಶಾಲ (ಸೊಳ್ಳ) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ೧೯೭೮ನೇ ಇಸವಿಯಿಂದ ಈವರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೫ ಅಂತರ್ಜಾತಿ ವಿವಾಹಗಳು ನಡೆದಿದ್ದು ಅವರಿಗೆ ಸರಕಾರದಿಂದ ನೀಡುವ ರೂ. ೫, ೦೦೦-೦೦ವನ್ನು ಈವರೆಗೆ ಪಾವತಿ ಮಾಡದೇ ಇರಲು ಕಾರಣವೇನು ?

ಆ. ಈ ಬಗ್ಗೆ ಈಗಲಾದರೂ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು) .—

ಅ. ೧೯೭೮ನೇ ಸಾಲಿನಿಂದ ಈವರೆಗೆ ೧೫ ಅಂತರ್ಜಾತಿ ವಿವಾಹಗಳು ನಡೆದಿದ್ದು ೫ ಅಂತರ್ಜಾತಿ ವಿವಾಹಗಳಿಗೆ ಧನ ಸಹಾಯ ಮಂಜೂರಾಗಿದೆ. ಇನ್ನುಳಿದ ೧೦ ಅಂತರ್ಜಾತಿ ವಿವಾಹಗಳಿಗೆ ಜಿಲ್ಲಾಧಿಕಾರಿಗಳು ನಿಯಮಾನುಸಾರ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಕಳುಹಿಸಿದ್ದಾರೆ.

ಆ. ಜಿಲ್ಲಾಧಿಕಾರಿಗಳಿಂದ ಶಿಫಾರಸ್ಸಾವನೆ ಪಡೆದು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಕುಶಾಲ.—ಅಂತರ್ಜಾತಿ ವಿವಾಹ ಮಾಡಿಕೊಂಡವರಿಗೆ ಸರ್ಕಾರದಿಂದ ಹಣ ಪಾವತಿ ಏಕೆ ಮಾಡಲಿಲ್ಲ ಎಂದು ನಾನು ಕೇಳಿದ್ದಕ್ಕೆ ಮಂಜೂರಾತಿ ಆಗಲಿಲ್ಲ ಎಂದು ಕೇಳಿದ್ದಲ್ಲ. ಇದರಲ್ಲಿ ಐದು ಜನರಿಗೆ ಮಂಜೂರಾತಿ ಆಗಿದೆ ೧೯೭೮ ರಿಂದ ೧೯೮೪ರ ವರೆಗೆ ಅಂದರೆ ಐದಾರು ವರ್ಷಗಳ ವರೆಗೆ ಅವರಿಗೆ ಹಣ ಕೊಡದಿರಲು ಕಾರಣ ಏನು ಎಂದು ಕೇಳುತ್ತಿದ್ದೇನೆ.

ಶ್ರೀ ವಿ. ಎಲ್. ಪಾಟೀಲ್.—ಅದನ್ನು ಪರಿಶೀಲನೆಗಾಗಿ ಕಳುಹಿಸಿದ್ದೇನೆ. ಜಿಲ್ಲಾಧಿಕಾರಿಗಳು ನಿಯಮಾನುಸಾರ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಕಳುಹಿಸಿದ್ದಾರೆ. ಅವರಿಂದ ಉತ್ತರ ಬಂದ ಕೂಡಲೇ ಪಾವತಿ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೆ. ಕುಶಾಲ.—ಇದು ಯಾರ ಜೇಜವಾಬ್ದಾರಿಯಿಂದ ಆಗಿದ್ದು ಎಂದು ಕೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ಇದು ಅಧಿಕಾರಿಗಳ ಜೇಜವಾಬ್ದಾರಿಯಿಂದ ಆಗಿರುವುದೇ ಅಥವಾ ಸರ್ಕಾರದ ಜೇಜವಾಬ್ದಾರಿತನದಿಂದ ಆಗಿದೆಯೇ ?

ಶ್ರೀ ವಿ. ಎಲ್. ಪಾಟೀಲ್.—ಇದರಲ್ಲಿ ಯಾರ ಜೇಜವಾಬ್ದಾರಿಯೂ ಇಲ್ಲ. ಪರಿಶೀಲನೆ ಮಾಡುವುದರಲ್ಲಿ ಸ್ವಲ್ಪ ತಡವಾಗಿದೆ. ಯಾರ ಅರ್ಜಿಗಳು ಪರಿಶೀಲನೆಯಾಗಿ ಬಂದಿವೆಯೋ ಅವುಗಳನ್ನು ವಿಲೇವಾರಿ ಮಾಡಿದ್ದಾರೆ.

ಶ್ರೀಮತಿ ಕೆ. ಎನ್. ನಾಗರತ್ನಮ್ಮ.—ನಮ್ಮ ಮಾನ್ಯ ಮಂತ್ರಿಗಳು ಯಾವಾಗ ನೋಡಿದರೂ ಕೂಡ ಪರಿಶೀಲನೆ ಮಾಡುತ್ತೇನೆ ಎಂದು ಹೇಳುತ್ತಾರೆ. ಪರಿಶೀಲನೆ ಮಾಡಲು ಎಷ್ಟು ವರ್ಷ ಬೇಕು ? ೧೯೭೮ನೇ ಇಸವಿಯಿಂದ ಇದು ೧೯೮೫ನೇ ಇಸವಿಯವರೆವಿಗೂ ಪರಿಶೀಲನೆಯಲ್ಲಿಯೇ ಇದ್ದರೆ ಹೇಗೆ ?

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಸದಸ್ಯೆಯವರು ಹೇಳುತ್ತಿದ್ದಾರೆ. ಇದನ್ನು ಬೇಗ ಮಾಡೋಣ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ಯಾವಾಗ ನೋಡಿದರೂ ಕೂಡ ಪರಿಶೀಲನೆ ಮಾಡೋಣವೆಂದು ಹೇಳುತ್ತಾರೆ. ಅವರು ಪರಿಶೀಲನೆ ಯಾವಾಗ ಮಾಡುತ್ತಾರೆ ? ಯಾವಾಗ ತೀರ್ಮಾನ ಮಾಡುತಾರೆ ? ಮತ್ತು ಕೊನೆ ಯಾವಾಗ ಮಾಡುತ್ತಾರೆ ? ೧೯೭೮ನೇ ಇಸವಿಯಿಂದ ಪರಿಶೀಲನೆ ಮಾಡುತ್ತಲೆ ಇದ್ದಾರೆ. ಪರಿಶೀಲನೆಯನ್ನು ಯಾವಾಗ ಪೂರ್ಣಗೊಸುತ್ತೀರಿ ? ದಯಮಾಡಿ ಹೇಳಬೇಕು ?

ಶ್ರೀ ವಿ. ಎಲ್. ಪಾಟೀಲ್.—ಜಿಲ್ಲಾಧಿಕಾರಿಗಳಿಂದ ವರದಿ ಬಂದ ತಕ್ಷಣ ತೀರ್ಮಾನ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ವರದಿ ಕಳುಹಿಸಿಕೊಡುತ್ತಾರಂತೆ, ಇವರು ಪರಿಶೀಲನೆ ಇನ್ನೂ ಮಾಡುತ್ತಾರಂತೆ. ಅಂದ ಮೇಲೆ ತೀರ್ಮಾನ ಯಾವಾಗ ಮಾಡುತ್ತೀರಿ ?

ಶ್ರೀ ವಿ. ಎಲ್. ಪಾಟೀಲ್.—ಜಿಲ್ಲಾಧಿಕಾರಿಗಳಿಂದ ಬಂದ ತಕ್ಷಣ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ವೇದಾಂತ ಹೆಬ್ಬಾರ್.—ಮಾನ್ಯ ಅಧ್ಯಕ್ಷರೇ ೫ ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುವುದಕ್ಕಾಗಿಯೇ ಮದುವೆ ಮಾಡಿಕೊಂಡರೆ ಇದರಲ್ಲಿ ಮಧುರ ಬಾಂಧವ್ಯ ಚೆನ್ನಾಗಿರುತ್ತದೆಯೇ ಅಥವಾ ಅಂತರ್ ಜಾತಿ ವಿವಾಹ ಮಾಡಿಕೊಂಡರೆ ಮಧುರ ಬಾಂಧವ್ಯ ಚೆನ್ನಾಗಿರುತ್ತದೆಯೋ ? ಇದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಕೆ. ಕಂಠಾಲ.—ಸ್ವಾಮಿ ಇನ್ನು ೧೦ ಜನರಿಗೆ ಹಣ ದೊರೆಯದೆ ಇರುವುದಕ್ಕೆ ಕಾರಣವೇನು ? ಇದಕ್ಕೆ ಸರ್ಕಾರ ಜವಾಬ್ದಾರಿಯೋ ಅಥವಾ ಅಧಿಕಾರಿಗಳು ಜವಾಬ್ದಾರಿಯೋ ?

ಶ್ರೀ ವಿ. ಎಲ್. ಪಾಟೀಲ್.—ಇದಕ್ಕೆ ಸರ್ಕಾರ ಕಾರಣವಲ್ಲ.

ಶ್ರೀ ಆರ್ ವೆಂಕಟರಾವಯ್ಯ.—ಸ್ವಾಮಿ ಮೂರು ನಾಲ್ಕು ತಿಂಗಳೊಳಗಾಗಿ ಹಣ ಪಾವತಿ ಮಾಡುವಂತೆ ಒಂದು ನಿರ್ಬಂಧ ಹಾಕಿದರೆ ಒಳ್ಳೆಯದಲ್ಲವೆ ?

ಹೊಸದುರ್ಗ ತಾಲ್ಲೂಕಿನಲ್ಲಿ ಅಂಗವಿಕಲರು, ವೃದ್ಧರು, ಮತ್ತು ವಿಧವೆಯರಿಗೆ ಮಾಶಾಸನವನ್ನು ಮಂಜೂರು ಮಾಡುವ ಬಗ್ಗೆ

೩೭೪. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ೧೯೫೩–೫೪ ಮತ್ತು ೧೯೫೪–೫೫ನೇ ಸಾಲಿನಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಜನ ಅಂಗವಿಕಲರು, ವೃದ್ಧರು, ಮತ್ತು ವಿಧವೆಯರಿಗೆ ಮಾಶಾಸನವನ್ನು ಮಂಜೂರು ಮಾಡಲಾಗಿದೆ ?

ಆ) ಸದರಿ ಮಂಜೂರಾತಿಯಲ್ಲಿ ಲೋಪದೋಷಗಳಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೆ. ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರ ಕ್ರಮವೇನು ?

ಇ) ಕೋಡಿಹಳ್ಳಿ ಗ್ರಾಮದ ಒಬ್ಬ ಮಹಿಳೆಗೆ ಎರಡು ವೇತನಗಳನ್ನು ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ಮತ್ತು ಹಾಗಿದ್ದಲ್ಲಿ ಸದರಿ ಮಹಿಳೆಗೆ ಎಷ್ಟು ತಿಂಗಳಿಂದ ಮೇಲ್ಕಂಡ ವೇತನಗಳು ಸಂದಾಯವಾಗಿದೆ ಮತ್ತು ಇದಕ್ಕೆ ಕಾರಣಕರ್ತರಾರು ?

ಈ) ಇದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಸರಕಾರದವರು ಕ್ರಮ ಕೈಗೊಳ್ಳುವರೇ ?

ಉ) ಕಂದಾಯ ಇಲಾಖೆಯಿಂದ ಕೋಡಿಹಳ್ಳಿ ಗಿರಿಯಮ್ಮನ ಹೆಸರಿಗೆ ಒಂದೇ ದಿನ ತಹಸೀಲ್ದಾರ್ ಮಂಜೂರಾತಿ ಮಾಡಿರುವ ಪತ್ರ ಸಬ್ ಟ್ರೆಜರಿಗೆ ಎರಡು ದಿನಾಂಕದಲ್ಲಿ ಹಣ ಪಾವತಿಗೆ ಹೋಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಊ) ಮಾಸಿಕ ವೇತನ ನೀಡುವಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ನಿಧಾನವಾಗಲು ಕಾರಣಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

	೧೯೫೩–೫೪	೧೯೫೪–೫೫
ಅ) ಅಂಗವಿಕಲ ವೇತನ	೨೭೨	೧೯೦
ವೃದ್ಧಾಪ್ಯವೇತನ	೫೭೨	೫೬೩
ನಿರ್ಗತಿಕ ವಿಧವೆಯರ ವೇತನ	—	೮೯೫

ಆ) ಇಲ್ಲ.

ಇ) ಕೋಡಿಹಳ್ಳಿ ಗ್ರಾಮದಲ್ಲಿ ಒಬ್ಬಳೆ ಮಹಿಳೆಗೆ ಎರಡು ವೇತನವನ್ನು ಮಂಜೂರು ಮಾಡಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) ಮೇಲೆ ಹೇಳಿರುವ ಉತ್ತರದ ಪ್ರಕಾರ ಇದು ಉದ್ಭವಿಸುವುದಿಲ್ಲ.

ಉ) ಇಲ್ಲ.

ಊ) ಮಂಜೂರಾದ ಆದೇಶವನ್ನು ಉಪ ಖಜಾನೆಗೆ ಒಂದು ವಾರದೊಳಗಾಗಿ ಪಾವತಿ ಮಾಡುವುದಕ್ಕೆ ಕಳುಹಿಸಲಾಗುವುದು.